■ ವಿಶಾಖ ಎನ್.

# ಯಶ್ ಚೋಪ್ರಾ
## ಸೋಲಿನ ಸೋಪಾನದ ಕಥೆ



ದಿ ರೊಮ್ಯಾಂಟಿಕ್ಸ್ ಎನ್ನುವ ಕೆಲವು ಕಂತುಗಳ ಸರಣಿ ನೆಟ್‌ಫ್ಲಿಕ್ಸ್‌ನಲ್ಲಿ ಪ್ರಸಾರವಾಗಿದೆ. ಯಶ್ ಚೋಪ್ರಾ ಬ್ಯಾನರ್‌ನ ಮರೆಯಲಾಗದ ಕೆಲವು ಸಿನಿಮಾಗಳ ಬಗೆಗೆ ಅದರಲ್ಲಿ ಮಾಹಿತಿ ಅಡಕವಾಗಿದೆ. ಅದರಲ್ಲಿ ಮುಖ್ಯವಾದದ್ದು, 1980ರ ದಶಕದಲ್ಲಿ ಅವರು ಹೇಗೆ ಹಿಂದಿ ಸಿನಿಮಾಗಳ ಸಿದ್ಧಸೂತ್ರವನ್ನು ಮುರಿದುಕಟ್ಟಲು ಹೆಣಗಾಡಿದರು ಎನ್ನುವುದು.

ಆ ದಶಕದ ಮೂರು ಘಟ್ಟಗಳಲ್ಲಿ ಅವರು ಮೂರು ಸಿನಿಮಾಗಳನ್ನು ಮಾಡಿದರು. ಮೊದಲು 'ಸಿಲ್‌ಸಿಲಾ' ತೆರೆಕಂಡಿತು. ಆಮೇಲೆ 'ಫಾಸ್ಲೆ'. ಅವೆರಡರ ನಂತರ ತೆರೆಕಂಡಿದ್ದು 'ವಿಜಯ್'. 'ಸಿಲ್‌ಸಿಲಾ' ಹಾಗೂ 'ಫಾಸ್ಲೆ' ದಯನೀಯವಾಗಿ ಸೋತವು. 'ವಿಜಯ್' ಮೂಲಕ ಗೆಲ್ಲಲೇಬೇಕು ಎಂದು ಯಶ್ ಚೋಪ್ರಾ ರಮಿಸುವ ಕೆಲವು ಆಪ್ತ ಸನ್ನಿವೇಶಗಳನ್ನು ಅಳವಡಿಸಿದರು. ಅನಿಲ್ ಕಪೂರ್ ಆ ಸಿನಿಮಾ ಅನುಭವವನ್ನು ಹಂಚಿಕೊಂಡಿರುವ ತುಣುಕು ಕೂಡ 'ದಿ ರೊಮ್ಯಾಂಟಿಕ್ಸ್'ನಲ್ಲಿದೆ. ಆಗೆಲ್ಲ ಒಂದು ಬಗೆಯಲ್ಲಿ ಅಭಿನಯದ ಕಮ್ಮಟದಂತೆ ತಮಗೆಲ್ಲ ಯಶ್ ಚೋಪ್ರಾ ಕೆಲಸ ಕಾಣಿಸಿತ್ತು ಎಂದು ಅವರು ಮೆಲುಕುಹಾಕಿದ್ದಾರೆ.ಗೆಲ್ಲಬಹುದು ಎಂದುಕೊಂಡಿದ್ದ 'ವಿಜಯ್' ಸಿನಿಮಾ ನೋಡಲು ಪ್ರೇಕ್ಷಕರು ಬರಲಿಲ್ಲ. ಆಗ ಯಶ್ ಚೋಪ್ರಾ ತಲೆಯ ತುಂಬ ಅನುಮಾನದ ಗುಂಗಿಹುಳ. ಸಾಹಸಪ್ರಧಾನ ಸಿನಿಮಾಗಳೆಲ್ಲ ಯಶಸ್ವಿಯಾಗುತ್ತಿದ್ದ ಸಂದರ್ಭದಲ್ಲಿ ನವಿರಾಗಿ ಏನನ್ನಾದರೂ ಹೇಳಲು ಹೊರಡುವುದೇ ಕಷ್ಟವಾಯಿತಲ್ಲ ಎಂದು ಅವರು ಪರಿತಪಿಸಿದ ಸಂದರ್ಭ ಅದು. ಆಗ ಅವರು 'ಚಾಂದಿನಿ' ಸಿನಿಮಾದ ಚಿತ್ರಕಥೆ ಎದುರಲ್ಲಿ ಇಟ್ಟುಕೊಂಡಿದ್ದರು. ಆಕಾಶವಾಣಿಗೆ ಕೆಲವು ಮಹಿಳಾಪ್ರಧಾನ ನಾಟಕಗಳನ್ನು ಬರೆದಿದ್ದ ಕಾಮ್ನಾ ಚಂದ್ರ ಅವರದ್ದೇ ಕಥೆ ಒಳಗೊಂಡ 'ಪ್ರೇಮ್ ರೋಗ್' ಸಿನಿಮಾವನ್ನು ರಾಜ್‌ಕಪೂರ್ ನಿರ್ದೇಶಿಸಿ ಗೆದ್ದಿದ್ದರು. ಯಶ್ ಚೋಪ್ರಾ ಅವರೂ ಅದೇ ಕಥೆಗಾರ್ತಿಯ 'ಚಾಂದಿನಿ'ಯನ್ನು ನೆಚ್ಚಿಕೊಂಡರು.



'ಚಾಂದಿನಿ' ಸಿನಿಮಾಗೆ ಯಶ್ ಚೋಪ್ರಾ ಮೊದಲು ಒಪ್ಪಿಸಿದ್ದು ರಿಷಿ ಕಪೂರ್ ಅವರನ್ನು. ಆಮೇಲೆ ಬೋನಿ ಕಪೂರ್ ಸಹಾಯ ಪಡೆದು, ದಕ್ಷಿಣ ಭಾರತದಲ್ಲಿ ಸಂಚಲನ ಮೂಡಿಸಿದ್ದ ಶ್ರೀದೇವಿ ಅವರನ್ನು ನಾಯಕಿಯಾಗಿ ಒಪ್ಪಿಸಿದರು. ಶ್ರೀದೇವಿ ತಾಯಿ ಅವರಿಗೆ ಆಗ ಯಶ್ ಚೋಪ್ರಾ ಕಾರ್ಯವೈಖರಿಯೇ ಗೊತ್ತಿರಲಿಲ್ಲವಂತೆ. ಒಳ್ಳೆಯ ಸಂಭಾವನೆ ಸಿಕ್ಕರೆ ಸಾಕೆನ್ನುವ ಮನಃಸ್ಥಿತಿ ಅವರದ್ದಾಗಿತ್ತೆಂದು ಆಗ ಯಶ್ ಚೋಪ್ರಾ ಹೇಳಿಕೊಂಡಿದ್ದರು. ಸಿನಿಮಾದಲ್ಲಿ ಬಿಳಿ ಸೀರೆಯನ್ನು ಅನೇಕ ದೃಶ್ಯಗಳಲ್ಲಿ ಉಡುವಂತೆ ಹೇಳಿದಾಗಲೂ ತಕರಾರು ತೆಗೆದಿದ್ದರಂತೆ. 'ನಮ್ಮ ಸಂಸ್ಕೃತಿಯಲ್ಲಿ ಬಿಳಿ ಸೀರೆ ಶುಭವಲ್ಲ' ಎಂದಿದ್ದ ಶ್ರೀದೇವಿ ಅವರ ತಾಯಿಗೆ ಮನವರಿಕೆ ಮಾಡಿಸಲೂ ಯಶ್ ಚೋಪ್ರಾ ಸಾಕಷ್ಟು ಪರದಾಡಿದ್ದರು ಎಂಬ ಸಂಗತಿ 'ದಿ ರೊಮ್ಯಾಂಟಿಕ್ಸ್'ನಲ್ಲಿದೆ.

ಮೂರು ಫ್ಲಾಪ್ ಚಿತ್ರಗಳನ್ನು ನೀಡಿದ್ದ ಯಶ್ ಚೋಪ್ರಾ ನಿರ್ದೇಶನದ ಈ ಸಿನಿಮಾ ಬಗೆಗೆ ಕೂಡ ಇಲ್ಲಸಲ್ಲದ ಪುಕಾರುಗಳು ಹಬ್ಬಿದ್ದವು. ಹೀಗಾಗಿ ಬಿಡುಗಡೆ ಮಾಡುವುದು ಆ ಕಾಲಘಟ್ಟದಲ್ಲಿ ಕಷ್ಟವೇ ಆಯಿತು. ಒಂದು ವೇಳೆ ಆ ಸಿನಿಮಾ ಸೋತಿದ್ದಿದ್ದರೆ ಬಹುಶಃ ಯಶ್ ಚೋಪ್ರಾ ನಿರ್ಮಾಣವನ್ನೇ ಸ್ಥಗಿತ ಮಾಡುತ್ತಿತ್ತು. ಆದರೆ, 'ಚಾಂದಿನಿ' ಸೂಪರ್‌ಹಿಟ್ ಆಯಿತು. ಯಶ್ ಚೋಪ್ರಾ ಆಗ ಕಟ್ಟಿದ ನಿರ್ಮಾಣ ಸಂಸ್ಥೆಯಿಂದ ಈಗಲೂ ಸಿನಿಮಾಗಳು ತಯಾರಾಗುತ್ತಿವೆ. ■

# ಹಿಂದಿಯಲ್ಲೂ ಕೀರವಾಣಿ

ಒಂದು ಕಾಲಘಟ್ಟದಲ್ಲಿ ಸಿನಿಮಾ ಸಂಗೀತದಿಂದಲೇ ಹೊರಗುಳಿಯಬೇಕು ಎಂದು ನಿರ್ಧರಿಸಿದ್ದವರು ಎಂ.ಎಂ. ಕೀರವಾಣಿ. ಅವರು ಎಂ.ಎಂ. ಕ್ರೀಮ್ ಎಂಬ ಇನ್ನೊಂದು ಹೆಸರಿನಲ್ಲಿ ಹಿಂದಿಯ ಕೆಲವು ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿರುವುದು ಸಂಗೀತಾಭಿಮಾನಿಗಳಿಗೆ ಗೊತ್ತಿರಲಿಕ್ಕೆ ಸಾಕು. ಮಹೇಶ್ ಭಟ್ ಹಾಗೂ ನೀರಜ್ ಪಾಂಡೆ ತಮ್ಮ ಸಿನಿಮಾಗಳಲ್ಲಿ ಕೀರವಾಣಿ ಅವರ ಸಂಗೀತದ ಟ್ರ್ಯಾಕ್‌ಗಳನ್ನು ಈ ಹಿಂದೆ ಬಳಸಿಕೊಂಡಿದ್ದರು.

'ಔರೋ ಮೇ ಕಹಾ ದಮ್ ಥಾ' ಎಂಬ ಇನ್ನೊಂದು ಸಿನಿಮಾಗೆ ಅವರು ನೀರಜ್ ಪಾಂಡೆ ಜತೆಗೆ ಕೆಲಸ ಮಾಡುತ್ತಿದ್ದಾರೆ. ಅದು ಸಾಹಸಪ್ರಧಾನ ಸಿನಿಮಾ ಆದರೂ ಸಂಗೀತಕ್ಕೆ ಸಾಕಷ್ಟು ಅವಕಾಶವಿದೆ ಎಂದಿರುವ ಕೀರವಾಣಿ, ಹಿಂದಿ ಭಾಷೆಯಲ್ಲಿ ಇನ್ನಷ್ಟು ಕೆಲಸಗಳನ್ನು ಮಾಡಲು ತಾವು ಸಿದ್ಧ ಎಂದೂ ಹೇಳಿದ್ದಾರೆ. ಹಿಂದಿ ಭಾಷೆಯಲ್ಲಿ ಬರೆಯಲು ಬರದೇ ಇದ್ದರೂ ಸಂಗೀತಕ್ಕೆ ಭಾಷೆಯಿಲ್ಲ ಎನ್ನುವುದನ್ನು ಒತ್ತಿಹೇಳುವ ಅವರು, 'ಆರ್‌ಆರ್‌ಆರ್' ಚಲನಚಿತ್ರದ 'ನಾಟು ನಾಟು' ಗೀತೆ ಎಲ್ಲ ಭಾಷೆಗಳ ಗಡಿಗಳನ್ನೂ ಮೀರಿ ಎಂತೆಂಥವರನ್ನೋ ಕುಣಿಸಿರುವುದನ್ನು ಉದಾಹರಣೆಯಾಗಿ ನೀಡುತ್ತಾರೆ. ■

